## ಕಾಮಿಡಿಗೆ ಬೇಕು ಸೆನ್ಸಾರ್

ಕಲರ್ಸ್ ಕನ್ನಡ ಚಾನೆಲ್‌ನಲ್ಲಿ ಪ್ರಸಾರವಾಗುವ ಪುಟ್ಟಗೌರಿ ಮದುವೆ, ಲಕ್ಷ್ಮೀ ಬಾರಮ್ಮ, ಅಗ್ನಿಸಾಕ್ಷಿ, ಮನೆದೇವ್ರು ಗಾಂಧಾರಿ ಮತ್ತು ಕಿನ್ನರಿ ಈ ಎಲ್ಲಾ ಧಾರಾವಾಹಿಗಳು ಏಕಪ್ರಕಾರದ ಸೂತ್ರಪಟದಲ್ಲಿ ಬಿಗಿಬಂಧವಿಲ್ಲದೆ ಸಾಗುತ್ತಿವೆ. ಎಲ್ಲಾ ಧಾರವಾಹಿಗಳಿಗೂ ಒಬ್ಬನೇ ಕಥೆಗಾರ ಎನಿಸುತ್ತಿದೆ. ಕತ್ತಲೆ ಕೊಠಡಿಗಳಲ್ಲಿ ಕೂಡಿಹಾಕಿ ಚಿತ್ರಹಿಂಸೆ ನೀಡುವುದು, ಮನೆಯ ಸದಸ್ಯರೇ ಸಂಚು ಮಾಡುವುದು, ಕೆಲವು ವಿಷಯಗಳನ್ನು ಮುಚ್ಚಿಡುವುದು ಅದು ಕೆಲವರಿಗೆ ಬಹಿರಂಗವಾಗದಂತೆ ಒದ್ದಾಡುವುದು ಇವು ಅವುಗಳಲ್ಲಿರುವ ಸಾಮಾನ್ಯ ಲಕ್ಷಣ. ಒಂದು ಧಾರಾವಾಹಿಯಲ್ಲಿ ದೇವಸ್ಥಾನಕ್ಕೆ, ಶಾಪಿಂಗ್, ಪ್ರವಾಸಕ್ಕೆ ಹೋದರೆ ಕೆಲವು ದಿನಗಳ ಅಂತರದಲ್ಲಿ ಎಲ್ಲಾ ಧಾರಾವಾಹಿಗಳಲ್ಲಿಯೂ ಅವು ಮರುಕಳಿಸುತ್ತವೆ.

ಇಂತಹ ಧಾರಾವಾಹಿಗಳ ಮಧ್ಯೆ ಝೀ ಕನ್ನಡದ ಡ್ರಾಮಾ ಜ್ಯೂನಿಯರ್ಸ್ 21 ವಾರಗಳ ಕಾಲ ಶುದ್ಧ ಮನರಂಜನೆಯ ಮಹಾಪೂರವನ್ನೇ ಹರಿಸಿತು. ಇತ್ತೀಚೆಗೆ ಆರಂಭಗೊಂಡ ಕಾಮಿಡಿ ಕಿಲಾಡಿಗಳು ಸೆನ್ಸಾರ್ ಅಳವಡಿಸಿಕೊಂಡರೆ ಸಹನೀಯವಾಗುತ್ತದೆ. ಹಾಸ್ಯದ ಹೆಸರಿನಲ್ಲಿ ಅಶ್ಲೀಲವನ್ನು ತರುವುದು ಬೇಡ.

ಸುಮಂತ್ ಮಂಗನಹಳ್ಳಿ

## ಝೀ ಕನ್ನಡ ಕುಟುಂಬ ಪುರಸ್ಕಾರ!

ಈ ವಿಭಾಗದಲ್ಲಿ ಅನೇಕ ವಾಹಿನಿಗಳಲ್ಲಿ ಕಂಗ್ಲಿಷ್ ಭಾಷೆ ಬಳಸುತ್ತಿರುವ ಬಗ್ಗೆ ಹಲವರು ಪತ್ರಿಸಿದ್ದಾರೆ. ಆದಾಗ್ಯೂ ನಮ್ಮ ವಾಹಿನಿಗಳಿಗೆ ಕನ್ನಡದತ್ತ ಗಮನ ಹರಿಸಲು ಪುರುಸೊತ್ತಿಲ್ಲ. ಇದಕ್ಕೆ ಇನ್ನೊಂದು ಸೇರ್ಪಡೆ ಇತ್ತೀಚೆಗೆ ನಡೆದ ಝೀ ಕನ್ನಡ ಕುಟುಂಬ ಅವಾರ್ಡ್ಸ್ ಎಂಬ ವಿಶೇಷ ಕಾರ್ಯಕ್ರಮ.

ಮೊದಲೇ ಇವರಿಗೆ ವಾಹಿನಿಯ ಪ್ರೇಕ್ಷಕರ ಕುರಿತು ಪ್ರಜ್ಞೆ ಇಲ್ಲ ಅನಿಸುತ್ತದೆ. ಶೇಕಡವಾರು ನಿಮ್ಮ ಕಾರ್ಯಕ್ರಮಗಳ ಶ್ರೋತೃಗಳು ಹಳ್ಳಿಗರೆಂಬ ಅರಿವಿರಬೇಕು. ನಗರವಾಸಿಗಳಿಗೆ ಕಚೇರಿಗಳಲ್ಲಿ ಕೆಲಸ ನಿರ್ವಹಿಸಿ ಮನೆ ಮುಟ್ಟುವಷ್ಟರಲ್ಲೇ ನಿಮ್ಮ ಕಾರ್ಯಕ್ರಮಗಳು ಮುಗಿದಿರುತ್ತವೆ. ಹೊಲಕ್ಕೆ ಹೋಗಿ ಬಂದ ರೈತಾಪಿ ಜನ, ಕೂಲಿಕಾರರು ಮನರಂಜನೆಗಾಗಿ ವಾಹಿನಿಯತ್ತ ಕಣ್ಣು ಹಾಯಿಸುತ್ತಾರೆ. ನೀವು ಹೀಗೆ ಕಂಗ್ಲಿಷನಲ್ಲಿ ಸಂವಹನ ಮಾಡಿದರೆ ಗತಿ ಏನು ? ನಿಮ್ಮ ಅವತರಣಿಕೆಗಳೇ ವಿಚಿತ್ರ! ಅವಾರ್ಡ್ಸ್‌ಗೆ ಕನ್ನಡದಲ್ಲಿ ಪುರಸ್ಕಾರ ಅಂದರೇನು ಮಾನ ಹೋಗುವುದೇ? ಕಾರ್ಯಕ್ರಮದಲ್ಲಿ ಪುರಸ್ಕಾರ ನೀಡಲು ಬಂದವರು ಇಂಗ್ಲೆಂಡಿನವರೇ ಎಂದೆನಿಸುವಂತಿತ್ತು ! ಬರೀ ವೈಯಾರದಿಂದ ಕಂಗ್ಲಿಷ್ ಭಾಷೆಯಲ್ಲಿ ಮಾತಾಡಿದರೇ ಕಲಾವಿದರೆಂದು ಗೊತ್ತಾಗುವುದೇ? ಅಣ್ಣಾವ್ರನ್ನು ನೆನೆದು ಮುಂದೆ ಅಡಿ ಇಡಿ. ಕನ್ನಡ ನೆಲದಲ್ಲಿ ಕನ್ನಡಕ್ಕಿರಲಿ ಮಾನ್ಯತೆ. ಇಲ್ಲದಿರೆ ಇದೊಂದು ನಮ್ಮತನದ ಅವನತಿಯೇ ತಾನೇ?

ಪ್ರಕಾಶ ಎಸ್. ಮನ್ನಂಗಿ, ಹಾವೇರಿ

ವಾರದ ಪತ್ರ

## ಕಥೆಗೆ ಪ್ರಾಧಾನ್ಯತೆ ಇರಲಿ

ಅಗ್ನಿ ಸಾಕ್ಷಿ ಹೆಸರೇನೋ ಚೆನ್ನಾಗಿದೆ. ಆದರೆ ಕತೆ ಬೇರೆಯೇ ಇದೆ. ಅಗ್ನಿಸಾಕ್ಷಿಯಾಗಿ ಯಾರು ಯಾರ ಕೈಹಿಡಿದರು? ಬರಿ ಕತೆ ತುಂಬ ದ್ವೇಷ, ಅಸೂಯೆ, ಒಬ್ಬರನ್ನೊಬ್ಬರು ವಂಚಿಸುವುದು. ಚಂದ್ರಕಾಳಿಗಂತೂ ಇಬ್ಬರು ಗಂಡಂದಿರು. ಇಬ್ಬರನ್ನೂ ವಂಚಿಸುವುದು. ಇದೆಂತಹ ಕತೆ? ಸಮಾಜಕ್ಕೆ ಸ್ವಲ್ಪವಾದರೂ ಉಪಯೋಗವಾಗಬೇಕು. ಇದರಿಂದ ಜನ ಪಾಠ ಕಲಿಯಬೇಕು. ಇನ್ನು ಅಕ್ಕ ಧಾರಾವಾಹಿ ಕೂಡಾ ಇದರಂತೆಯೇ. ಭೂಮಿಕಾಳಿಗೆ ಇಬ್ಬರು ಗಂಡಂದಿರು. ಒಬ್ಬನಿಗೆ ಗೊತ್ತಾಗದಂತೆ ಇನ್ನೊಬ್ಬನ ಜೊತೆ ಕದ್ದು ಮಾತಾಡುವುದು. ನಿಮಗೆ ಒಳ್ಳೆ ಕತೆ ಸಿಗಲಿಲ್ಲವೆ? ಹೆಂಗಸರ ಕೈಯಲ್ಲಿ ಪಿಸ್ತೂಲು, ಚಾಕು ಹಿಡಿಸಿ ಕತೆ ಹೆಣೆಯುವುದರಿಂದ ಎಲ್ಲರ ಮನಸ್ಸಿನಲ್ಲಿ ದ್ವೇಷ ಮೂಡುತ್ತದೆಯೇ ಹೊರತು ಏನೂ ಪ್ರಯೋಜನವಿಲ್ಲ. ಸಾಧ್ಯವಾದಷ್ಟು ಒಳ್ಳೆ ಕತೆ ಬರಲಿ.

ರುಕ್ಮಿಣಿ ಕೃ. ದೇಶಪಾಂಡೆ, ಗೋಕಾಕ

## ಆದರ್ಶವಾಗಿರಲಿ!

ಉದಯ ಟಿವಿಯಲ್ಲಿ ಈ ಹಿಂದೆ ಜನಪ್ರಿಯ ಕಾರ್ಯಕ್ರಮವಾಗಿದ್ದ 'ಆದರ್ಶ ದಂಪತಿಗಳು' ಕಾರ್ಯಕ್ರಮ ಮತ್ತೆ ಆರಂಭಗೊಂಡಿದೆ. ಅಂದು ಪ್ರಖ್ಯಾತಿ ತಂದುಕೊಟ್ಟವರು ಶ್ರೀನಾಥ್– ಶೈಲಜಾ ಜೋಡಿ. ಈಗ ಸಿಹಿಕಹಿ ಚಂದ್ರು ಮತ್ತು ಗೀತಾ ಈ ಕಾರ್ಯಕ್ರಮದ ಸಾರಥ್ಯ ವಹಿಸಿದ್ದಾರೆ.

ಈ ಹಿಂದೆ ಶ್ರೀನಾಥ್‌ರವರು ನಡೆಸಿಕೊಡುತ್ತಿದ್ದಾಗ ಸದಭಿರುಚಿ ಇರುತ್ತಿತ್ತು. ಅಶ್ಲೀಲತೆಯ ಗೆರೆ ದಾಟದಂತೆ ನೋಡಿಕೊಂಡು ಅತ್ಯಂತ ಚೇತೋಹಾರಿಯಾಗಿ ಅವರು ಕಾರ್ಯಕ್ರಮ ನಿರೂಪಿಸುತ್ತಿದ್ದರು. ಆದರೆ ಈಗ ಚಂದ್ರು–ಗೀತಾರವರು ನಡೆಸಿಕೊಡುತ್ತಿರುವ ಈ ಕಾರ್ಯಕ್ರಮ ಎಲ್ಲೋ ತೂಕ ತಪ್ಪಿದೆ ಎನಿಸುತ್ತಿದೆ ದಿ.30.10.16ರ ಭಾನುವಾರ ಬೆಳಿಗ್ಗೆ ಪ್ರಸಾರವಾದ ಈ ಕಾರ್ಯಕ್ರಮದಲ್ಲಿ ಚಂದ್ರುರವರು ದಂಪತಿಯೊಬ್ಬರಿಗೆ ಕೇಳಿದ ಪ್ರಶ್ನೆ 'ನೀವು ನಿಮ್ಮ ಹೆಂಡತಿಗೆ ದಿನಕ್ಕೆ ಎಷ್ಟು ಬಾರಿ ಕಿಸ್ (ಮುತ್ತು) ಕೊಡುತ್ತೀರಿ?' ಎಂದು.

ಮದುವೆ ಮತ್ತು ನಂತರ ನಡೆಯುವ ಎಲ್ಲಾ ಕ್ರಿಯೆ ಖಾಸಗಿಯಾಗಿರುವಾಗ ಈ ತರಹದ ಪ್ರಶ್ನೆಗಳು ಒಂದು ಕಾರ್ಯಕ್ರಮದ ಸೌಂದರ್ಯವನ್ನು ಹಾಳು ಮಾಡಿಬಿಡುತ್ತದೆ. ಹಾಸ್ಯ ಇರಬೇಕು. ಅದು ತೀರಾ ಅಶ್ಲೀಲ ಇರಕೂಡದು, ಹಾಗೆಯೇ ಹಾಸ್ಯಾಸ್ಪದವೂ ಆಗಬಾರದು. ಚಂದ್ರುರವರು ಹಿರಿಯ ಕಲಾವಿದ, ನಿರ್ದೇಶಕ ಎನಿಸಿಕೊಂಡರೂ ಆ ಸಮಯದಲ್ಲಿ ಅವರು ಆಡುವ ಮಾತು, ಹಾವಭಾವ ಅವರ ಕುರಿತ ಗೌರವವನ್ನು ಕಡಿಮೆ ಮಾಡಬಹುದು. ಇದೇ ರೀತಿ ಅವರು ನಡೆದರೆ ಆದರ್ಶದಂಪತಿಗಳು ಕಾರ್ಯಕ್ರಮದ ಜನಪ್ರಿಯತೆ ಕಡಿಮೆಯಾಗಬಹುದು.

–ಎಸ್.ಲಕ್ಷ್ಮೀನರಸಿಂಹ, ಚಾಮರಾಜನಗರ

## ಸಹಜ 'ಮಾತ್ ಮಾತಲ್ಲಿ..'

ಸ್ಟಾರ್ ಸುವರ್ಣ ವಾಹಿನಿಯಲ್ಲಿ ಪ್ರಸಾರವಾಗುತ್ತಿರುವ (ಪ್ರತಿ ರಾತ್ರಿ 8.30ಕ್ಕೆ) 'ಜಸ್ಟ್ ಮಾತ್ ಮಾತಲ್ಲಿ' ಧಾರಾವಾಹಿ ಅತ್ಯಂತ ಸಹಜ ಸಂಭಾಷಣೆಗಳೊಂದಿಗೆ ಮೂಡಿ ಬರುತ್ತಿದೆ. ಮಧ್ಯಮವರ್ಗದ ವೇಷ ಭೂಷಣ, ನವಿರಾದ ಮೇಕಪ್‌ನಲ್ಲಿ ಸಿಂಧು ಸುಂದರವಾಗಿ ಕಾಣುತ್ತಾಳೆ. ಪ್ರಣಯ ಜೋಡಿಗಳ ಸಹಜ ಮಾತು ಹಿತವೆನಿಸುತ್ತದೆ. ರಿಚರ್ಡ್ ಲೂಯಿಸ್ ಲಘು ಹಾಸ್ಯದೊಂದಿಗೆ ಮಗನ ಸ್ನೇಹಿತನಾಗಿ ಉತ್ತಮ ಅಭಿನಯ ನೀಡಿದ್ದಾರೆ.

–ಮಧು ಸುಬ್ರಹ್ಮಣ್ಯ, ಬೆಂಗಳೂರು

## ವಿಭಿನ್ನ ರೀತಿಯ 'ಥಟ್..

28.10.16 ರಂದು ಚಂದನ ವಾಹಿನಿಯಲ್ಲಿ ಪ್ರಸಾರವಾದ 'ಥಟ್ ಅಂತ ಹೇಳಿ' ಕಾರ್ಯಕ್ರಮ ವಿಭಿನ್ನ ರೀತಿಯದಾಗಿತ್ತು. ಅಂದು ಡಾ. ನಾ. ಸೋಮೇಶ್ವರ್ ಅವರು ವಿದ್ವಾನ್ ವಿನೋದ್ ಶ್ಯಾಂ ಅವರೊಂದಿಗೆ ನಡೆಸಿದ ಕಾರ್ಯಕ್ರಮದಲ್ಲಿ, ಅವರು ಮಾಡಿಕೊಟ್ಟ ತಾಳವಾದ್ಯಗಳ ಪರಿಚಯ ಅರ್ಥಪೂರ್ಣವಾಗಿತ್ತು. ನಾವು ಕಂಡು ಕೇಳರಿಯದ ಹಲವು ವಾದ್ಯಗಳ ಬಗ್ಗೆ ವಿನೋದ್ ಶ್ಯಾಂ ಅವರು ಸರಳ ರೀತಿಯಲ್ಲಿ ವಿವರಿಸಿದ್ದು ಕಾರ್ಯಕ್ರಮದ ಹೈಲೈಟ್ಸ್ ಎನ್ನಬಹುದು. ಇದಕ್ಕೆ ಡಾ. ನಾ. ಸೋಮೇಶ್ವರ್ ಅವರಿಗೂ, ವಿದ್ವಾನ್ ವಿನೋದ್ ಶ್ಯಾಂ ಅವರಿಗೂ ವಂದನೆಗಳು.

–ಸುಂದರ್, ಬೆಂಗಳೂರು

## ಫ್ಲರ್ಟ್ ಬೇಡ

ಸರಿಗಮಪ ಸೀಸನ್ 12ರಲ್ಲಿ ನಿರೂಪಕಿಯ ವರ್ತನೆ ತುಂಬಾ ಕಿರಿಕಿರಿ ಅನಿಸುತ್ತದೆ. ಮುದ್ದು ಮಕ್ಕಳ ಮುದ್ದಾದ ಹಾಡುಗಳ ಮಧ್ಯೆ ನಿರೂಪಕಿಯ ಮಾತು, ನಿರ್ಣಾಯಕರ ಜೊತೆ ಫ್ಲರ್ಟ್ ಮಾಡುವುದು ತುಂಬಾ ಅಸಹ್ಯವೆನಿಸುತ್ತದೆ.

–ವೀಣಾ ಪ್ರಭಾಕರ ಹೆಬ್ಬಾರ, ಮೈಸೂರು

## ಸೆನ್ಸಾರ್ ಬೇಕು!

'ಪುಟ್ಟ ಗೌರಿ' ಮದುವೆಯಲ್ಲಿ ಈಗ ಕೆಲವು ವಾರಗಳಿಂದ ತೋರಿಸುತ್ತಿರುವ ಕ್ರೌರ್ಯ, ಕೊಲೆ ಪ್ರಯತ್ನ, ಕೊಲೆಗೆ ಮಾಡುತ್ತಿರುವ ಸಂಚು, ಬಲಾತ್ಕಾರ, ಇವುಗಳನ್ನೆಲ್ಲಾ ನೋಡಿದರೆ ನಿರ್ದೇಶಕರು, ಈ ಎಲ್ಲ ವಿಷಯಗಳ ಬಗ್ಗೆ ತರಗತಿ ನಡೆಸುತ್ತಿದ್ದಾರೆ ಅನಿಸುತ್ತದೆ. ಇಂತಹ ಕ್ರೌರ್ಯದ ಸನ್ನಿವೇಶಗಳನ್ನು ಸೆನ್ಸಾರ್ ಮಂಡಳಿ ಅಥವಾ ಸರ್ಕಾರ ನಿಷೇಧಿಸಬೇಕು.

–ಸಿ.ಆರ್.ಶ್ರೀನಿವಾಸಲು, ಬೆಂಗಳೂರು